# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ರಾಜ್ಯದ ಗ್ರಾಮೀಣ ಪ್ರದೇಶಗಳಲ್ಲಿ ತುರ್ತು ಕುಡಿಯುವ ನೀರಿನ ಕಾಮಗಾರಿಗಳ ಅನುಷ್ಠಾನಕ್ಕಾಗಿ ಹೆಚ್ಚುವರಿ / ವಿಶೇಷ ಅನುದಾನ ಬಿಡುಗಡೆ ಕುರಿತು.

ಓದಲಾಗಿದೆ:
1. ಜನಪ್ರತಿನಿದಿಗಳು / ಜಿಲ್ಲಾ ಪಂಚಾಯತಿಗಳಿಂದ ಸ್ವೀಕೃತಿಯಾಗಿರುವ ಹೆಚ್ಚುವರಿ ಅನುದಾನ ಬೇಡಿಕೆಯ ಪ್ರಸ್ತಾವನೆಗಳು.
2. ಆರ್ಥಿಕ ಇಲಾಖೆ ಸಹಮತಿ ಸಂ.ಆಇ/116/ವೆಚ್ಚ-6/2016, ದಿನಾಂಕ 19-03-2016

---

**ಪೀಠಿಕೆ:**

ಪ್ರಸ್ತುತ, ರಾಜ್ಯದ ಗ್ರಾಮೀಣ ಪ್ರದೇಶಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ಉದ್ಭವಿಸಿರುವಂತಹ ಸಮಸ್ಯಾತ್ಮಕ ಗ್ರಾಮಗಳಲ್ಲಿ ಕುಡಿಯುವ ನೀರಿನ ಸೌಲಭ್ಯ ಕಲ್ಪಿಸುವ ಸಲುವಾಗಿ ಹೆಚ್ಚುವರಿ / ವಿಶೇಷ ಅನುದಾನ ಬಿಡುಗಡೆ ಮಾಡಲು ಉಲ್ಲೇಖ (1) ರಲ್ಲಿ ಬೇಡಿಕೆಯ ಪ್ರಸ್ತಾವನೆಗಳು ಸಲ್ಲಿಕೆಯಾಗಿದ್ದು, ಈ ಸಂಬಂಧ ಹೆಚ್ಚುವರಿ ಬೇಡಿಕೆ ಪ್ರಸ್ತಾಪದಂತೆ ತುರ್ತು ಕುಡಿಯುವ ನೀರಿನ ಕಾಮಗಾರಿಗಳನ್ನು ಆದ್ಯತೆ ಮೇಲೆ ಸಾರ್ವಜನಿಕ ಹಿತದೃಷ್ಟಿಯಿಂದ ಅನುಷ್ಠಾನಗೊಳಿಸಲು ಹೆಚ್ಚುವರಿ ಅನುದಾನ ಬಿಡುಗಡೆ ಮಾಡಬೇಕಾಗಿದೆ. ಅಂತೆಯೇ ಸದರಿ ಬೇಡಿಕೆಗಳನ್ನು ಪರಿಶೀಲಿಸಿ **2016-17ನೇ** ಸಾಲಿನ ಏಪ್ರಿಲ್-2016 ಮಾಹೆಯಲ್ಲಿ **NRDWP** ಯೋಜನೆಯ ರಾಜ್ಯ ವಲಯದಡಿ ಹೆಚ್ಚುವರಿಯಾಗಿ ಲೆಕ್ಕ ಶೀರ್ಷಿಕೆ 2215-01-102-9-08-132 ಅಡಿ ಒಟ್ಟು ರೂ.94.50 ಕೋಟಿ ಅನುದಾನವನ್ನು ಬಿಡುಗಡೆ ಮಾಡಲು ಉಲ್ಲೇಖ (2) ರಲ್ಲಿ ಆರ್ಥಿಕ ಇಲಾಖೆಯು ಸಹಮತಿಸಿರುತ್ತದೆ. ಈ ಹಿನ್ನೆಲೆಯಲ್ಲಿ ರಾಜ್ಯದ ಎಲ್ಲಾ (30) ಜಿಲ್ಲಾ ಪಂಚಾಯತಿ ವ್ಯಾಪ್ತಿಯಲ್ಲಿನ ಸಮಸ್ಯಾತ್ಮಕ ಗ್ರಾಮಗಳಲ್ಲಿ ತುರ್ತಾಗಿ ಕುಡಿಯುವ ನೀರಿನ ಸೌಲಭ್ಯ ಕಲ್ಪಿಸಲು ಅಗತ್ಯವಿರುವ ತುರ್ತು ಕುಡಿಯುವ ನೀರಿನ ಕಾಮಗಾರಿಗಳನ್ನು ಅನುಷ್ಠಾನಗೊಳಿಸಲು / ಪೂರ್ಣಗೊಳಿಸಲು ಹೆಚ್ಚುವರಿ ಅನುದಾನ (ಗ್ರಾಮೀಣ ಮತ ಕ್ಷೇತ್ರವಾರು) ಬಿಡುಗಡೆ ಮಾಡಬೇಕಾಗಿದೆ. ಆದ್ದರಿಂದ ಈ ಕೆಳಕಂಡ ಆದೇಶ.

## ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ/133/ಗ್ರಾನೀಸ(2)/2015, ಬೆಂಗಳೂರು, ದಿನಾಂಕ 19.03.2016

ಪೀಠಿಕೆಯಲ್ಲಿನ ವಾಸ್ತವಾಂಶಗಳ ಹಿನ್ನೆಲೆಯಲ್ಲಿ **NRDWP** ಮಾರ್ಗಸೂಚಿಗಳನ್ವಯ ರಾಜ್ಯ ವಲಯದ **MNP (C&Q)** ಘಟಕದ ಲೆಕ್ಕ ಶೀರ್ಷಿಕೆ 2215-01-102-9-08-132 ಅಡಿ **ರೂ.94.50 ಕೋಟಿ** (ತೊಂಭತ್ನಾಲ್ಕು ಕೋಟಿ ಐವತ್ತು ಲಕ್ಷ ರೂಪಾಯಿಗಳು ಮಾತ್ರ) ಗಳನ್ನು ಈ ಆದೇಶದೊಂದಿಗೆ ಲಗತ್ತಿಸಿರುವ **ಅನುಬಂಧ-1** ರಲ್ಲಿರುವಂತೆ 2016-17ನೇ ಸಾಲಿಗೆ ರಾಜ್ಯದ ಎಲ್ಲಾ (30) ಜಿಲ್ಲಾ ಪಂಚಾಯತಿಗಳಿಗೆ (ಗ್ರಾಮೀಣ ಮತ ಕ್ಷೇತ್ರವಾರು) ಬಿಡುಗಡೆ ಮಾಡಲು ಸರ್ಕಾರವು ಹರ್ಷಿಸುತ್ತದೆ.

2. ಈ ಆದೇಶದಲ್ಲಿ ಬಿಡುಗಡೆಯಾದ ಅನುದಾನವು ಕೆಳಕಂಡ ನಿಬಂಧನೆಗೊಳಪಟ್ಟಿರುತ್ತದೆ:

I. ಮೇಲೆ ಓದಲಾದ ಸರ್ಕಾರದ ಸುತ್ತೋಲೆಯಲ್ಲಿನ ಮಾರ್ಗಸೂಚಿಗಳನ್ವಯ ಅನುಮೋದಿಸಲ್ಪಟ್ಟ ಕಾಮಗಾರಿಗಳನ್ನು ಮಾತ್ರ ಅನುಷ್ಠಾನಗೊಳಿಸಬೇಕು.

II. ಎಲ್ಲಿ ನೈಜವಾಗಿ ಕುಡಿಯುವ ನೀರಿನ ಸಮಸ್ಯೆಯಿದೆಯೋ ಅಂತಹ ಕಡೆಗಳಲ್ಲಿ ಮಾತ್ರ ಅಗತ್ಯ ಮನಃಶ್ಚೇತನ ಅಂದರೆ – ಕೊಳವೆ ಬಾವಿಗಳನ್ನು ಕೊರೆಯಿಸುವುದು, ಸ್ವಚ್ಛಗೊಳಿಸುವುದು, ಹೈಡ್ರೋಫ್ರಾಕ್ಚರಿಂಗ್‌ಗೊಳಿಸುವುದು, ಪಂಪ್ ಫ್ಲಷಿಂಗ್, ಮೋಟಾರ್ ಅಳವಡಿಸುವುದು, ಪೈಪ್‌ಲೈನ್ ವಿಸ್ತರಣೆ, ವಿದ್ಯುತ್ ಸಂಪರ್ಕದಂತಹ ಸಣ್ಣ ಪ್ರಮಾಣದ ಕಾಮಗಾರಿಗಳನ್ನು ಸಧ್ಯದ ನೀರಿನ ಬವಣೆಗಳನ್ನು ನೀಗಿಸಲು ಮಾತ್ರ ಅನುಷ್ಠಾನಗೊಳಿಸತಕ್ಕದ್ದು, ಹಾಗೂ ಖಾಸಗಿ ಬೋರ್‌ವೆಲ್‌ಗಳ ಸೇವೆ ಪಡೆಯುವಂತಹ ಕ್ರಮಗಳನ್ನು ಕೈಗೊಳ್ಳತಕ್ಕದ್ದು.

III. ತೀವ್ರ ಅನಿವಾರ್ಯವಿದ್ದಲ್ಲಿ ಮಾತ್ರ ಭೂ ವಿಜ್ಞಾನಿಗಳ ಸಲಹೆ ಮೇರೆಗೆ ಹೊಸ ಬೋರ್‌ವೆಲ್‌ಗಳನ್ನು ಕೊರೆಸಿ, ಸದರಿ ಬೋರ್‌ವೆಲ್‌ಗಳು ಸಾರ್ವಜನಿಕ ಉಪಯೋಗಕ್ಕೆ ಲಭ್ಯವಾಗುವಂತೆ ನೋಡಿಕೊಳ್ಳತಕ್ಕದ್ದು.

IV. ಹೊಸ ಕೊಳವೆ ಬಾವಿಗಳನ್ನು ಕೊರೆಯುವ ಮುನ್ನ ಅದರ ಸ್ಥಳ ಮತ್ತು ಗುರುತಿಗಾಗಿ **GPS System** ಮುಖೇನ ಅಧಿಕೃತ ದಾಖಲೆ ಮಾಡುವುದರ ಜೊತೆಗೆ, ಅದರ ಛಾಯಾ ಚಿತ್ರವನ್ನು ಕಾಮಗಾರಿಗೆ ಮುನ್ನ ಹಾಗೂ ನಂತರ ತೆಗೆದು ಗಾಂಧಿ ಸಾಕ್ಷಿಕಾಯಕದಲ್ಲಿ ದಾಖಲಿಸತಕ್ಕದ್ದು. ಸಂಬಂಧಪಟ್ಟ ಸ್ಥಳೀಯ ಹಿರಿಯ ಅಧಿಕಾರಿ ಈ ಪ್ರಕ್ರಿಯೆಯನ್ನು ಧೃಡೀಕರಿಸತಕ್ಕದ್ದು.

V. ಈ ಆದೇಶದೊಂದಿಗೆ ಲಗತ್ತಿಸಿರುವ **ಅನುಬಂಧ-1** ರಲ್ಲಿನ ಅನುದಾನವನ್ನು ಮಾನ್ಯ ಶಾಸಕರ ಅಧ್ಯಕ್ಷತೆಯಲ್ಲಿರುವ ಟಾಸ್ಕ್ ಫೋರ್ಸ್ ಸಮಿತಿಗಳ ಶಿಫಾರಸ್ಸಿನನ್ವಯ ವಿನಿಯೋಗಿಸತಕ್ಕದ್ದು ಹಾಗೂ ಹೊಸ ಬೋರ್‌ವೆಲ್ ಮತ್ತು ತುರ್ತು ಪುನಃಶ್ಚೇತನ ಕಾಮಗಾರಿಗಳಿಗೆ ವಿನಿಯೋಗಿಸತಕ್ಕದ್ದು.

VI. ಕ್ರಿಯಾ ಯೋಜನೆಯನ್ನು ಆಯಾ ಜಿಲ್ಲಾ ಪಂಚಾಯತ್‌ನ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಟಾಸ್ಕ್‌ಫೋರ್ಸ್ ಸಮಿತಿಗಳ ಶಿಫಾರಸ್ಸಿನನ್ವಯ ಅನುಮೋದಿಸತಕ್ಕದ್ದು. ಈಗ ಒದಗಿಸಿರುವ ಅನುದಾನದ ಮಿತಿಯೊಳಗೆ ತುರ್ತು ಕಾಮಗಾರಿಗಳನ್ನು ಸ್ಥಳೀಯ ಅಗತ್ಯತೆ ಆಧರಿಸಿ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, **ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ** (RDWSD) ಮುಖೇನ ಅನುಷ್ಠಾನಗೊಳಿಸಬೇಕು.

3. ಅನುಷ್ಠಾನಗೊಳಿಸಿರುವ ಕಾಮಗಾರಿಗಳ ವಿವರಗಳನ್ನು ಸಂಬಂಧಪಟ್ಟ ಗ್ರಾಮ ಪಂಚಾಯತಿಗಳ ಮಾಹಿತಿಗಾಗಿ ಕಳುಹಿಸುವುದು. **ಜಿಲ್ಲಾ ಪಂಚಾಯತ್ ಯಾವುದೇ ಕಾರಣಕ್ಕೂ ಈ ಆದೇಶದಲ್ಲಿ ಹೇಳಲಾದ ಕಾಮಗಾರಿಗಳು ಇತರೆ ಯಾವುದೇ ಗ್ರಾಮೀಣ ನೀರು ಸರಬರಾಜು ಯೋಜನೆಗಳಡಿ ಪುನರಾವರ್ತನೆಯಾಗದಂತೆ ನೋಡಿಕೊಳ್ಳತಕ್ಕದ್ದು.** ಕಾಮಗಾರಿಗಳ ಅನುಷ್ಠಾನಕ್ಕೆ ಮುನ್ನ ಸಕ್ಷಮ ಪ್ರಾಧಿಕಾರದಿಂದ ತಾಂತ್ರಿಕ ಅನುಮೋದನೆ ಪಡೆದುಕೊಳ್ಳತಕ್ಕದ್ದು.

4. ಈ ಆದೇಶದಲ್ಲಿ ಬಿಡುಗಡೆಯಾದ ಅನುದಾನವನ್ನು 2016-17ನೇ ಸಾಲಿನಲ್ಲಿ ಆಯುಕ್ತರು, **ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ (RDWSD)** ರವರ ಮೇಲು ರುಜುವಿನೊಂದಿಗೆ ರಾಜ್ಯ ಹುಜೂರು ಖಜಾನೆಯಿಂದ ಲೆಕ್ಕ ಶೀರ್ಷಿಕೆ 2215-01-102-9-08-132 ಅಡಿ ಡ್ರಾ ಮಾಡಿ ಕೇಂದ್ರ ಸರ್ಕಾರಕ್ಕೆ ಘೋಷಿಸಿರುವ ಸಿಂಡಿಕೇಟ್ ಬ್ಯಾಂಕ್‌ನ **SB ಖಾತೆ ಸಂಖ್ಯೆ: 04462010091577** ಗೆ ರಾಷ್ಟ್ರೀಯ ಗ್ರಾಮೀಣ ಕುಡಿಯುವ ನೀರಿನ ಯೋಜನೆ **(NRDWP)** ಯಡಿ ರಾಜ್ಯದ ಪಾಲಾಗಿ ಜಮೆ ಮಾಡತಕ್ಕದ್ದು.

5. ಈ ಆದೇಶದಲ್ಲಿ ಬಿಡುಗಡೆಯಾದ ರಾಜ್ಯವಲಯದ ಅನುದಾನವನ್ನು **ಲೆಕ್ಕಶೀರ್ಷಿಕೆ:2215-01-102-9-08-133** ರಡಿ ಗಣನೆಗೆ ತೆಗೆದುಕೊಂಡು, **RTGS** ಮುಖೇನ ರಾಜ್ಯ ನೀರು ಮತ್ತು ನೈರ್ಮಲ್ಯ ಮಿಷನ್ **(SWSM)** ಬ್ಯಾಂಕ್ ಖಾತೆ ಮುಖೇನ ವಿನಿಯೋಗಿಸತಕ್ಕದ್ದು. **ಸಿಂಡಿಕೇಟ್ ಬ್ಯಾಂಕ್ ಮೂಲ ಖಾತೆ ಸಂಖ್ಯೆ: 04462010091577** ಮುಖೇನ ಸಂಬಂಧಪಟ್ಟ (ಅನುಬಂಧ-1ರಲ್ಲಿನಂತೆ) ಜಿಲ್ಲಾ ಪಂಚಾಯತ್‌ಗಳು ಕಳುಹಿಸುವ ಬಿಲ್‌ಗಳನ್ನು ಮಾನ್ಯ ಮಾಡತಕ್ಕದ್ದು. ಸದರಿ **ರೂ.94.50ಕೋಟಿ** ಅನುದಾನ ವಿನಿಯೋಗದ ಆರ್ಥಿಕ ಮತ್ತು ಭೌತಿಕ ಪ್ರಗತಿಗಳನ್ನು ಸಂಬಂಧಪಟ್ಟ ಜಿಲ್ಲಾ ಪಂಚಾಯತ್‌ಗಳು **IMIS**ನಡಿ ಹಾಗೂ **ಗಾಂಧಿ ಸಾಕ್ಷಿ ಕಾಯಕದಲ್ಲಿ** ದಾಖಲಿಸತಕ್ಕದ್ದು.

6. ಸರ್ಕಾರದ ಸುತ್ತೋಲೆ ಸಂಖ್ಯೆ:ಗ್ರಾಅಪ 117 ಗ್ರಾನೀಸ(4) 2011 ದಿ:15.10.2011ರನ್ವಯ ಅಧೀಕ್ಷಕ ಅಭಿಯಂತರರು, **ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ** (RDWSD) ವೃತ್ತ ಕಛೇರಿ ಇವರುಗಳು ಈ ಆದೇಶದಡಿ ಅನುಷ್ಠಾನಗೊಳಿಸುವ ಕಾಮಗಾರಿಗಳಿಗೆ ಸಂಬಂಧಿಸಿದಂತೆ ಪರಿವೀಕ್ಷಣೆ ಮಾಡಿ, ಸರ್ಕಾರಕ್ಕೆ ವಾಸ್ತವಿಕ ಚಿತ್ರಣ ನೀಡತಕ್ಕದ್ದು.

7. ಈ ಆದೇಶವನ್ನು ಆರ್ಥಿಕ ಇಲಾಖೆ ಸಹಮತಿ ಸಂಖ್ಯೆ: ಆಇ/116/ವೆಚ್ಚ-6/2016, ದಿನಾಂಕ: 19-03-2016 ರನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

19/3/16

(ಎಂ. ಮಂಜುನಾಥ ನಾಯಕ್)
ಆಯುಕ್ತರು ಹಾಗೂ ಪದನಿಮಿತ್ತ
ಸರ್ಕಾರದ ಅಪರ ಕಾರ್ಯದರ್ಶಿ
ಗ್ರಾ.ಕು.ನೀ & ನೈ. ಇಲಾಖೆ.

ಪ್ರತಿಗಳು:

1. ಮಹಾಲೇಖಪಾಲರು (ಲೆಕ್ಕಪತ್ರ) ಕರ್ನಾಟಕ, ಬೆಂಗಳೂರು.
2. ಮಹಾಲೇಖಪಾಲರು (ಎಯು–1) ಕರ್ನಾಟಕ, ಬೆಂಗಳೂರು.
3. ಮಹಾಲೇಖಪಾಲರು (ಎಯು–2) ಕರ್ನಾಟಕ, ಬೆಂಗಳೂರು.
4. ಉಪ ಮಹಾಲೇಖಪಾಲರು, ಮಹಾಲೇಖಪಾಲರು (ಎಯು–1) ರವರ ಶಾಖಾ ಕಛೇರಿ, ಕಾಲೇಜು ರಸ್ತೆ, ಧಾರವಾಡ.
5. ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂ. ರಾಜ್ ಸಚಿವರ ಆಪ್ತ ಕಾರ್ಯದರ್ಶಿಗಳು, ವಿಧಾನಸೌಧ, ಬೆಂಗಳೂರು.
6. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ ಹಾಗೂ ಅಭಿವೃದ್ಧಿ ಆಯುಕ್ತರ ಆಪ್ತ ಕಾರ್ಯದರ್ಶಿ,ವಿಧಾನಸೌಧ, ಬೆಂಗಳೂರು.
7. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ / ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ, ವಿಧಾನಸೌಧ / ವಿಕಾಸಸೌಧ ಬೆಂಗಳೂರು.
8. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಯೋಜನಾ ಇಲಾಖೆ ಇವರ ಆಪ್ತ ಕಾರ್ಯದರ್ಶಿಗಳು,
9. ಬೆಂಗಳೂರು. ವಿಶೇಷಾಧಿಕಾರಿ (ಜಿಪಂ) ಹಾಗೂ ಸರ್ಕಾರದ ಪದನಿಮಿತ್ತ ಉಪಕಾರ್ಯದರ್ಶಿಗಳು, ಆರ್ಥಿಕ ಇಲಾಖೆ, ಬೆಂಗಳೂರು–09
10. ~~ಸರ್ಕಾರದ ಅಧೀನ ಕಾರ್ಯದರ್ಶಿ, ವೆಚ್ಚ (6) (ಜಿಪಂ), ಆರ್ಥಿಕ ಇಲಾಖೆ, ವಿಧಾನಸೌಧ, ಬೆಂಗಳೂರು.~~
11. ಮುಖ್ಯ ಇಂಜಿನಿಯರ್, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ, 2ನೇ ಮಹಡಿ, ಕಾವೇರಿಭವನ, ಬೆಂಗಳೂರು–09.
12. ರಾಜ್ಯದ ಎಲ್ಲಾ (30) ಜಿಲ್ಲಾ ಪಂಚಾಯತ್‌ಗಳ ಅಧ್ಯಕ್ಷರುಗಳು
13. ರಾಜ್ಯದ ಎಲ್ಲಾ (30) ಜಿಲ್ಲಾ ಪಂಚಾಯತ್‌ಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು / ಮುಖ್ಯ ಲೆಕ್ಕಾಧಿಕಾರಿಗಳು.
14. ರಾಜ್ಯದ ಎಲ್ಲಾ (4) ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವೃತ್ತಗಳ ಸೂಪರಿಂಟೆಂಡಿಂಗ್ ಇಂಜಿನಿಯರ್‌ಗಳು.
15. ರಾಜ್ಯದ ಎಲ್ಲಾ (30) ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗಗಳ ಕಾರ್ಯಪಾಲಕ ಇಂಜಿನಿಯರ್‌ಗಳು.
16. ರಾಜ್ಯದ ಎಲ್ಲಾ (176) ತಾಲ್ಲೂಕು ಪಂಚಾಯತಿಗಳ ಕಾರ್ಯನಿರ್ವಾಹಕ ಅಧಿಕಾರಿಗಳು.
17. ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ ಅಪರ ಮುಖ್ಯ ಕಾರ್ಯದರ್ಶಿ / ಕಾರ್ಯದರ್ಶಿ (ಪಂ.ರಾಜ್) ಇವರ ಆಪ್ತ ಕಾರ್ಯದರ್ಶಿಗಳು.
18. ಆಯುಕ್ತರು, RDWSD ಮತ್ತು ಪದನಿಮಿತ್ತ ಸರ್ಕಾರದ ಅಪರ ಕಾರ್ಯದರ್ಶಿ / ಆಂತರಿಕ ಆರ್ಥಿಕ ಸಲಹೆಗಾರರು / ಇವರುಗಳ ಆಪ್ತ ಸಹಾಯಕರು.
19. ನಿರ್ದೇಶಕರು, ಶ್ರೀ ಅಬ್ದುಲ್ ನಜೀರ್‌ಸಾಬ್‌ರವರ ಗ್ರಾಮೀಣಾಭಿವೃದ್ಧಿ ರಾಜ್ಯ ಸಂಸ್ಥೆ, ಲಲಿತ್ ಮಹಲ್ ರಸ್ತೆ, ಮೈಸೂರು.
20. ಉಪ ನಿರ್ದೇಸಕರು, Network Management Center (TNMC), ನಂ.49, ಖನಿಜ ಭವನ, ರೇಸ್ ಕೋರ್ಸ ರಸ್ತೆ, ಬೆಂಗಳೂರು.
21. ಎಲ್ಲಾ (30) ಜಿಲ್ಲಾ ಖಜಾನಾಧಿಕಾರಿಗಳು.
22. ಮ್ಯಾನೇಜರ್, ಸಿಂಡಿಕೇಟ್ ಬ್ಯಾಂಕ್, BWSSB ಬ್ರ್ಯಾಂಚ್, ರಾಜದ್ದೂತ್ ಕಾಂಪ್ಲೆಕ್ಸ್, ಅವೆನ್ಯೂ ರಸ್ತೆ, ಬೆಂಗಳೂರು.
23. ಮುಖ್ಯ ಸಂಪಾದಕರು ಮತ್ತು ಸಂಪರ್ಕಾಧಿಕಾರಿ "ಕರ್ನಾಟಕ ವಿಕಾಸ" ಗ್ರಾಅಪಂ.ರಾಜ್ ಇಲಾಖೆ, ಬೆಂಗಳೂರು.
24. ರಾಜ್ಯದ ಎಲ್ಲಾ ಸಹಾಯಕ ಕಾರ್ಯಪಾಲಕ ಇಂಜಿನಿಯರ್, ಪಂ.ರಾ.ಇಂ, ಮತ್ತು ಗ್ರಾ.ಕು.ನೀ ಮತ್ತು ನೈರ್ಮಲ್ಯ ಉಪ ವಿಭಾಗಗಳು.
25. ಶಾಖಾಧಿಕಾರಿ, ರವಾನೆ ಮತ್ತು ಸ್ವೀಕೃತಿ ಶಾಖೆ, ಗ್ರಾಅಪಂ.ರಾಜ್ ಇಲಾಖೆ (ವಾರದ ಗೆಜೆಟ್‌ನಲ್ಲಿ ಪ್ರಕಟಿಸಲು 5 ಪ್ರತಿಗಳು).
26. ರಾಜ್ಯ ಪತ್ರಾಗಾರ ಇಲಾಖೆ (ಬಿಡಿ ಪ್ರತಿ ಶಾಖೆ).
27. ಗ್ರಾಅಪಂ.ರಾಜ್ ಇಲಾಖೆಯ ಮಾಹಿತಿ ಕೇಂದ್ರ (10 ಪ್ರತಿಗಳು).
28. ಶಾಖಾ ರಕ್ಷಾ ಕಡತಃ ಹೆಚ್ಚುವರಿ ಪ್ರತಿಗಳು.

# ಅನುಬಂಧ – 1

**ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ/133/ಗ್ರಾನೀಸ(2)/2015, ಬೆಂಗಳೂರು, ದಿನಾಂಕ 19.03.2016ರ ಲಗತ್ತು**

| ಕ್ರ ಸಂ | ಜಿಲ್ಲೆ | ಗ್ರಾಮೀಣ ಮತಕ್ಷೇತ್ರ | | ಬಿಡುಗಡೆ ಮಾಡಲಾದ ಅನುದಾನ (ರೂ.ಲಕ್ಷಗಳಲ್ಲಿ) |
|---|---|---|---|---|
| 1 | ಬಾಗಲಕೋಟೆ | 1 | ಬೀಳಗಿ | 50.00 |
| | | 2 | ಜಮಖಂಡಿ | 50.00 |
| | | 3 | ಮುಧೋಳ | 50.00 |
| | | 4 | ಬಾದಾಮಿ | 50.00 |
| | | 5 | ಹುನಗುಂದ | 50.00 |
| | | 6 | ತೆರೆದಾಳ್ | 50.00 |
| | | 7 | ಬಾಗಲಕೋಟೆ | 50.00 |
| | | | ಒಟ್ಟು | **350.00** |
| 2 | ಬೆಂಗಳೂರು (ಗ್ರಾ) | 8 | ದೇವನಹಳ್ಳಿ | 50.00 |
| | | 9 | ದೊಡ್ಡಬಳ್ಳಾಪುರ | 50.00 |
| | | 10 | ಹೊಸಕೋಟೆ | 50.00 |
| | | 11 | ನೆಲಮಂಗಲ | 50.00 |
| | | | ಒಟ್ಟು | **200.00** |
| 3 | ಬೆಂಗಳೂರು (ನ) | 12 | ಆನೇಕಲ್ | 50.00 |
| | | 13 | ಬ್ಯಾಟರಾಯನಪುರ- | 50.00 |
| | | 14 | ಬೆಂಗಳೂರು (ದಕ್ಷಿಣ) | 50.00 |
| | | 15 | ಮಹದೇವಪುರ | 50.00 |
| | | 16 | ಯಲಹಂಕ | 50.00 |
| | | 17 | ಯಶವಂತಪುರ | 50.00 |
| | | | ಒಟ್ಟು | **300.00** |
| 4 | ಬೆಳಗಾವಿ | 18 | ಅಥಣಿ | 50.00 |
| | | 19 | ಸೌವದತ್ತಿ | 50.00 |
| | | 20 | ಚಿಕ್ಕೋಡಿ | 50.00 |
| | | 21 | ರಾಮದುರ್ಗ | 50.00 |
| | | 22 | ಬೈಲಹೊಂಗಲ | 50.00 |
| | | 23 | ಹುಕ್ಕೇರಿ | 50.00 |
| | | 24 | ರಾಯಭಾಗ | 50.00 |
| | | 25 | ಗೋಕಾಕ್ | 50.00 |
| | | 26 | ಖಾನಾಪುರ | 50.00 |
| | | 27 | ಬೆಳಗಾವಿ | 50.00 |
| | | 28 | ಬೆಳಗಾವಿ (ದಕ್ಷಿಣ) | 50.00 |
| | | 29 | ಯಮಕನ್‌ಮರಡಿ | 50.00 |
| | | 30 | ಕಾಗವಾಡ್ | 50.00 |
| | | 31 | ಕುಡಚಿ | 50.00 |
| | | 32 | ನಿಪ್ಪಣಿ | 50.00 |
| | | 33 | ಬೈಲಹೊಂಗಲ –ಕಿತ್ತೂರ್ | 50.00 |
| | | 34 | ಗೋಕಾಕ್ – ಅರೆಭಾವಿ | 50.00 |
| | | | ಒಟ್ಟು | **850.00** |
| 5 | ಬಳ್ಳಾರಿ | 35 | ಬಳ್ಳಾರಿ | 50.00 |
| | | 36 | ಕಂಪ್ಲಿ | 50.00 |
| | | 37 | ವಿಜಯನಗರ | 50.00 |
| | | 38 | ಹಗರಿಬೊಮ್ಮನಹಳ್ಳಿ | 50.00 |
| | | 39 | ಕೂಡ್ಲಗಿ | 50.00 |
| | | 40 | ಸಂಡೂರು | 50.00 |
| | | 41 | ಸಿರಗುಪ್ಪ | 50.00 |
| | | 42 | ಹಡಗಲಿ | 50.00 |
| | | | ಒಟ್ಟು | **400.00** |
| 6 | ಬೀದರ್ | 43 | ಬೀದರ್ (ಉತ್ತರ) | 50.00 |
| | | 44 | ಬೀದರ್ (ದಕ್ಷಿಣ) | 50.00 |
| | | 45 | ಔರಾದ್ | 50.00 |
| | | 46 | ಭಾಲ್ಕಿ | 50.00 |
| | | 47 | ಬಸವಕಲ್ಯಾಣ | 50.00 |
| | | 48 | ಹುಮನಾಬಾದ್ | 50.00 |
| | | | ಒಟ್ಟು | **300.00** |

| ಕ್ರ. ಸಂ | ಜಿಲ್ಲೆ | ಗ್ರಾಮೀಣ ಮತಕ್ಷೇತ್ರ | | ಬಿಡುಗಡೆ ಮಾಡಲಾದ ಅನುದಾನ (ರೂ.ಲಕ್ಷಗಳಲ್ಲಿ) |
|---|---|---|---|---|
| 7 | ಬಿಜಾಪುರ | 49 | ಬಬ್ಲೇಶ್ವರ | 50.00 |
| | | 50 | ನಾಗಠಾಣ | 50.00 |
| | | 51 | ದೇವರ ಹಿಪ್ಪರಗಿ | 50.00 |
| | | 52 | ಬಸವನಬಾಗೇವಾಡಿ | 50.00 |
| | | 53 | ಬಿಜಾಪುರ | 50.00 |
| | | 54 | ಇಂಡಿ | 50.00 |
| | | 55 | ಸಿಂಧಗಿ | 50.00 |
| | | 56 | ಮುದ್ದೇಬಿಹಾಳ | 50.00 |
| | | | ಒಟ್ಟು | 400.00 |
| 8 | ಚಾಮರಾಜನಗರ | 57 | ಚಾಮರಾಜನಗರ | 50.00 |
| | | 58 | ಗುಂಡ್ಲುಪೇಟೆ | 50.00 |
| | | 59 | ಕೊಳ್ಳೆಗಾಲ | 50.00 |
| | | 60 | ಹನೂರು | 50.00 |
| | | | ಒಟ್ಟು | 200.00 |
| 9 | ಚಿಕ್ಕಬಳ್ಳಾಪುರ | 61 | ಚಿಕ್ಕಬಳ್ಳಾಪುರ | 50.00 |
| | | 62 | ಚಿಂತಾಮಣಿ | 50.00 |
| | | 63 | ಗೌರಿಬಿದನೂರು | 50.00 |
| | | 64 | ಬಾಗೇಪಲ್ಲಿ | 50.00 |
| | | 65 | ಶಿಡ್ಲಘಟ್ಟ | 50.00 |
| | | | ಒಟ್ಟು | 250.00 |
| 10 | ಚಿಕ್ಕಮಗಳೂರು | 66 | ಕಡೂರು | 50.00 |
| | | 67 | ತರೀಕೆರೆ | 50.00 |
| | | 68 | ಚಿಕ್ಕಮಗಳೂರು | 50.00 |
| | | 69 | ಶೃಂಗೇರಿ | 50.00 |
| | | 70 | ಮೂಡಿಗೆರೆ | 50.00 |
| | | | ಒಟ್ಟು | 250.00 |
| 11 | ಚಿತ್ರದುರ್ಗ | 71 | ಚಳ್ಳಕೆರೆ | 50.00 |
| | | 72 | ಚಿತ್ರದುರ್ಗ | 50.00 |
| | | 73 | ಹೊಸದುರ್ಗ | 50.00 |
| | | 74 | ಮೊಳಕಾಲ್ಮೂರು | 50.00 |
| | | 75 | ಹಿರಿಯೂರು | 50.00 |
| | | 76 | ಹೊಳಲ್ಕೆರೆ | 50.00 |
| | | | ಒಟ್ಟು | 300.00 |
| 12 | ದಕ್ಷಿಣ ಕನ್ನಡ | 77 | ಬಂಟ್ವಾಳ | 50.00 |
| | | 78 | ಬೆಳ್ತಂಗಡಿ | 50.00 |
| | | 79 | ಮಂಗಳೂರು (ಉತ್ತರ) | 50.00 |
| | | 80 | ಮಂಗಳೂರು (ದಕ್ಷಿಣ) | 50.00 |
| | | 81 | ಮೂಡಬಿದಿರೆ | 50.00 |
| | | 82 | ಪುತ್ತೂರು | 50.00 |
| | | 83 | ಸುಳ್ಯ | 50.00 |
| | | | ಒಟ್ಟು | 350.00 |
| 13 | ದಾವಣಗೆರೆ | 84 | ಜಗಳೂರು | 50.00 |
| | | 85 | ಮಾಯಕೊಂಡ | 50.00 |
| | | 86 | ಹರಪನಹಳ್ಳಿ | 50.00 |
| | | 87 | ದಾವಣಗೆರೆ (ದಕ್ಷಿಣ) | 50.00 |
| | | 88 | ದಾವಣಗೆರೆ (ಉತ್ತರ) | 50.00 |
| | | 89 | ಹೊನ್ನಾಳಿ | 50.00 |
| | | 90 | ಚನ್ನಗಿರಿ | 50.00 |
| | | 91 | ಹರಿಹರ | 50.00 |
| | | | ಒಟ್ಟು | 400.00 |
| 14 | ಧಾರವಾಡ | 92 | ನವಲಗುಂದ | 50.00 |
| | | 93 | ಕುಂದಗೋಳ | 50.00 |
| | | 94 | ಕಲಘಟಗಿ | 50.00 |
| | | 95 | ಧಾರವಾಡ | 50.00 |
| | | | ಒಟ್ಟು | 200.00 |
| 15 | ಗದಗ | 96 | ಗದಗ | 50.00 |
| | | 97 | ರೋಣ | 50.00 |
| | | 98 | ಶಿರಹಟ್ಟಿ | 50.00 |
| | | 99 | ನರಗುಂದ | 50.00 |
| | | | ಒಟ್ಟು | 200.00 |

| ಕ್ರ. ಸಂ | ಜಿಲ್ಲೆ | ಗ್ರಾಮೀಣ ಮತಕ್ಷೇತ್ರ | | ಬಿಡುಗಡೆ ಮಾಡಲಾದ ಅನುದಾನ (ರೂ.ಲಕ್ಷಗಳಲ್ಲಿ) |
|---|---|---|---|---|
| 16 | ಗುಲ್ಬರ್ಗಾ | 100 | ಅಫಜಲ್‌ಪುರ | 50.00 |
| | | 101 | ಆಳಂದ | 50.00 |
| | | 102 | ಚಿಂಚೋಳಿ | 50.00 |
| | | 103 | ಚಿತ್ತಾಪುರ | 50.00 |
| | | 104 | ಗುಲ್ಬರ್ಗಾ (ದಕ್ಷಿಣ) | 50.00 |
| | | 105 | ಗುಲ್ಬರ್ಗಾ (ಗ್ರಾಮಾಂತರ) | 50.00 |
| | | 106 | ಜೇವರ್ಗಿ | 50.00 |
| | | 107 | ಸೇಡಂ | 50.00 |
| | | | ಒಟ್ಟು | 400.00 |
| 17 | ಹಾಸನ | 108 | ಅರಸೀಕೆರೆ | 50.00 |
| | | 109 | ಹಾಸನ | 50.00 |
| | | 110 | ಶ್ರವಣಬೆಳಗೊಳ | 50.00 |
| | | 111 | ಹೊಳೆನರಸೀಪುರ | 50.00 |
| | | 112 | ಅರಕಲಗೂಡು | 50.00 |
| | | 113 | ಬೇಲೂರು | 50.00 |
| | | 114 | ಸಕಲೇಶಪುರ | 50.00 |
| | | | ಒಟ್ಟು | 350.00 |
| 18 | ಹಾವೇರಿ | 115 | ರಾಣೆಬೆನ್ನೂರು | 50.00 |
| | | 116 | ಶಿಗ್ಗಾವಿ & ಸವಣೂರು ಡಿವಿಷನ್ | 50.00 |
| | | 117 | ಹಾವೇರಿ & ಸವಣೂರು ಡಿವಿಷನ್ | 50.00 |
| | | 118 | ಹಿರೇಕೆರೂರು | 50.00 |
| | | 119 | ಬ್ಯಾಡಗಿ | 50.00 |
| | | 120 | ಹಾನಗಲ್ | 50.00 |
| | | | ಒಟ್ಟು | 300.00 |
| 19 | ಕೊಡಗು | 121 | ಮಡಿಕೇರಿ | 50.00 |
| | | 122 | ವಿರಾಜಪೇಟೆ | 50.00 |
| | | | ಒಟ್ಟು | 100.00 |
| 20 | ಕೋಲಾರ | 123 | ಬಂಗಾರಪೇಟೆ | 50.00 |
| | | 124 | ಕೆ.ಜಿ.ಎಫ್ | 50.00 |
| | | 125 | ಕೋಲಾರ | 50.00 |
| | | 126 | ಶ್ರೀನಿವಾಸಪುರ | 50.00 |
| | | 127 | ಮುಳಬಾಗಿಲು | 50.00 |
| | | 128 | ಮಾಲೂರು | 50.00 |
| | | | ಒಟ್ಟು | 300.00 |
| 21 | ಕೊಪ್ಪಳ | 129 | ಗಂಗಾವತಿ | 50.00 |
| | | 130 | ಕನಕಗಿರಿ | 50.00 |
| | | 131 | ಕೊಪ್ಪಳ | 50.00 |
| | | 132 | ಕುಷ್ಟಗಿ | 50.00 |
| | | 133 | ಯಲಬುರ್ಗ | 50.00 |
| | | | ಒಟ್ಟು | 250.00 |
| 22 | ಮಂಡ್ಯ | 134 | ಕೆ.ಆರ್.ಪೇಟೆ | 50.00 |
| | | 135 | ಮದ್ದೂರು | 50.00 |
| | | 136 | ಮಳವಳ್ಳಿ | 50.00 |
| | | 137 | ಮಂಡ್ಯ | 50.00 |
| | | 138 | ನಾಗಮಂಗಲ | 50.00 |
| | | 139 | ಮೇಲುಕೋಟೆ | 50.00 |
| | | 140 | ಶ್ರೀರಂಗಪಟ್ಟಣ | 50.00 |
| | | | ಒಟ್ಟು | 350.00 |
| 23 | ಮೈಸೂರು | 141 | ಕೃಷ್ಣಾರಾಜನಗರ | 50.00 |
| | | 142 | ವರುಣ | 50.00 |
| | | 143 | ನಂಜನಗೂಡು | 50.00 |
| | | 144 | ಟಿ.ನರಸೀಪುರ | 50.00 |
| | | 145 | ಚಾಮುಂಡೇಶ್ವರಿ | 50.00 |
| | | 146 | ಪಿರಿಯಾಪಟ್ಟಣ | 50.00 |
| | | 147 | ಹುಣಸೂರು | 50.00 |
| | | 148 | ಹೆಗ್ಗಡದೇವನಕೋಟೆ | 50.00 |
| | | | ಒಟ್ಟು | 400.00 |

| ಕ್ರ. ಸಂ | ಜಿಲ್ಲೆ | ಗ್ರಾಮೀಣ ಮತಕ್ಷೇತ್ರ | | ಬಿಡುಗಡೆ ಮಾಡಲಾದ ಅನುದಾನ (ರೂ.ಲಕ್ಷಗಳಲ್ಲಿ) |
|---|---|---|---|---|
| 24 | ರಾಯಚೂರು | 149 | ದೇವದುರ್ಗ | 50.00 |
| | | 150 | ಮಸ್ಕಿ | 50.00 |
| | | 151 | ಲಿಂಗಸುಗೂರು | 50.00 |
| | | 152 | ಮಾನ್ವಿ | 50.00 |
| | | 153 | ರಾಯಚೂರು | 50.00 |
| | | 154 | ಸಿಂಧನೂರು | 50.00 |
| | | | ಒಟ್ಟು | 300.00 |
| 25 | ರಾಮನಗರ | 155 | ಚನ್ನಪಟ್ಟಣ | 50.00 |
| | | 156 | ಕನಕಪುರ | 50.00 |
| | | 157 | ಮಾಗಡಿ | 50.00 |
| | | 158 | ರಾಮನಗರ | 50.00 |
| | | | ಒಟ್ಟು | 200.00 |
| 26 | ಶಿವಮೊಗ್ಗ | 159 | ಭದ್ರಾವತಿ | 50.00 |
| | | 160 | ಶಿವಮೊಗ್ಗ | 50.00 |
| | | 161 | ಶಿಕಾರಿಪುರ | 50.00 |
| | | 162 | ಸೊರಬ | 50.00 |
| | | 163 | ತೀರ್ಥಹಳ್ಳಿ | 50.00 |
| | | 164 | ಸಾಗರ | 50.00 |
| | | | ಒಟ್ಟು | 300.00 |
| 27 | ತುಮಕೂರು | 165 | ಕುಣಿಗಲ್ | 50.00 |
| | | 166 | ಮಧುಗಿರಿ | 50.00 |
| | | 167 | ಪಾವಗಡ | 50.00 |
| | | 168 | ಶಿರಾ | 50.00 |
| | | 169 | ತುಮಕೂರು | 50.00 |
| | | 170 | ಚಿಕ್ಕನಾಯಕನಹಳ್ಳಿ | 50.00 |
| | | 171 | ಗುಬ್ಬಿ | 50.00 |
| | | 172 | ತಿಪಟೂರು | 50.00 |
| | | 173 | ಕೊರಟಗೆರೆ | 50.00 |
| | | 174 | ತುರುವೇಕೆರೆ | 50.00 |
| | | | ಒಟ್ಟು | 500.00 |
| 28 | ಉತ್ತರ ಕನ್ನಡ | 175 | ಶಿರಸಿ | 50.00 |
| | | 176 | ಹಳಿಯಾಳ | 50.00 |
| | | 177 | ಬಟ್ಕಳ | 50.00 |
| | | 178 | ಕಾರವಾರ | 50.00 |
| | | 179 | ಕುಮುಟ | 50.00 |
| | | 180 | ಯಲ್ಲಾಪುರ | 50.00 |
| | | | ಒಟ್ಟು | 300.00 |
| 29 | ಉಡುಪಿ | 181 | ಉಡುಪಿ | 50.00 |
| | | 182 | ಬೈಂದೂರು | 50.00 |
| | | 183 | ಕುಂದಾಪುರ | 50.00 |
| | | 184 | ಕೊಪ್ಪ | 50.00 |
| | | 185 | ಕಾರ್ಕಳ | 50.00 |
| | | | ಒಟ್ಟು | 250.00 |
| 30 | ಯಾದಗಿರಿ | 186 | ಶಹಾಪುರ | 50.00 |
| | | 187 | ಶೋರಾಪುರ | 50.00 |
| | | 188 | ಗುರುಮಿಟ್ಕಲ್ | 50.00 |
| | | 189 | ಯಾದಗಿರಿ | 50.00 |
| | | | ಒಟ್ಟು | 200.00 |
| | | | ಒಟ್ಟು ಮೊತ್ತ | 9450.00 |

[signature] 19/3/16

ಆಯುಕ್ತರು ಹಾಗೂ ಪದನಿಮಿತ್ತ
ಸರ್ಕಾರದ ಅಪರ ಕಾರ್ಯದರ್ಶಿ
ಗ್ರಾ.ಕು.ನೀ & ನೈ. ಇಲಾಖೆ.